ಕರ್ನಾಟಕ ಸರ್ಕಾರ
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
**DIRECTORATE OF MEDICAL EDUCATION**
BMC&RI (Old Building), 1st Floor, Fort, K.R. Road, Bengaluru-560002.

Phone:+91-80-22870060
Fax:+91-80-22875798
dmekarnataka@yahoo.com

No. DME/NRC(1)/14 /2022-23 ದಿನಾಂಕ: 11-01-2023.

ಇವರಿಗೆ,
ನಿರ್ದೇಶಕರು ಹಾಗೂ ಡೀನ್ / ಪ್ರಾಂಶುಪಾಲರು,
ರಾಜ್ಯದ ಎಲ್ಲಾ ಜಿಲ್ಲೆಗಳ ಸರ್ಕಾರಿ ವೈದ್ಯಕೀಯ ಕಾಲೇಜುಗಳು/
ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ/ಸರ್ಕಾರಿ ಅಲೈಡ್ ಹೆಲ್ತ್ ಸೈನ್ಸ್, ಕಾಲೇಜುಗಳು.

ಮಾನ್ಯರೇ,

ವಿಷಯ: ಬಿ.ಎಸ್ಸಿ ನರ್ಸಿಂಗ್/ಬಿ.ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ 2022ರ ಮಾಪ್ ಅಪ್ ಸುತ್ತಿನ ಸೀಟು ಹಂಚಿಕೆ ಬಗ್ಗೆ.

ಉಲ್ಲೇಖ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಇಡಿ/ಕೆಇಎ/ ನರ್ಸಿಂಗ್/2022, ದಿನಾಂಕ: 10.01.2023.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2022-23ನೇ ಸಾಲಿನ ಬಿ.ಎಸ್ಸಿ ನರ್ಸಿಂಗ್/ಬಿ.ಎಸ್ಸಿ ನರ್ಸಿಂಗ್ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳಿಗೆ ಪ್ರಾಧಿಕಾರದಿಂದ ಎರಡು ಸುತ್ತಿನ ಸೀಟು ಹಂಚಿಕೆಯನ್ನು ನಡೆಸಲಾಗಿರುತ್ತದೆ. ಉಳಿಕೆ ಸೀಟುಗಳನ್ನು ಮಾಪ್ ಅಪ್ ಸುತ್ತಿನ ಮೂಲಕ ಆಯಾ ಸರ್ಕಾರಿ ನರ್ಸಿಂಗ್/ವೈದ್ಯಕೀಯ ಕಾಲೇಜಿನ ಆಡಳಿತಾಧಿಕಾರಿ, ಕಾಲೇಜಿನ ಪ್ರಾಂಶುಪಾಲರು ಹಾಗೂ ಹಿರಿಯ ಉಪನ್ಯಾಸಕರನ್ನೊಳಗೊಂಡ ಸಮಿತಿಯ ಮೂಲಕ ನಡೆಸಲು ನಿರ್ಧರಿಸಲಾಗಿರುತ್ತದೆ.

ಬಿ.ಎಸ್ಸಿ ನರ್ಸಿಂಗ್ ಸೀಟುಗಳಿಗೆ ಸಂಬಂಧಿಸಿದಂತೆ ದಿನಾಂಕ: 16.01.2023 ಕೊನೆಯ ದಿನಾಂಕವಾಗಿರುವ ಕಾರಣ ದಿನಾಂಕ: 12.01.2023ರಂದು ಮಾಪ್ ಅಪ್ ಸುತ್ತನ್ನು ನಡೆಸಲು ಖಾಲಿ ಉಳಿದಿರುವ ಸೀಟುಗಳಿಗೆ ಸೀಟ್ ಮ್ಯಾಟ್ರಿಕ್ಸ್‌ನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇದಲ್ಲದೆ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಕಾಲೇಜಿಗೆ ಪ್ರವೇಶ ಪಡೆಯದೇ ಖಾಲಿ ಇರುವಂತಹ ಸೀಟುಗಳಿಗೂ ಸಹ ಆಯಾ ಜಿಲ್ಲೆಯ ವೈದ್ಯಕೀಯ / ನರ್ಸಿಂಗ್ ಕಾಲೇಜುಗಳಲ್ಲಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಈ ಕೆಳಗಿನ ಮಾನದಂಡಗಳ ಅನ್ವಯ ನಡೆಸಲು ಸೂಚಿಸಿದೆ.

1. ಸರ್ಕಾರಿ ಕಾಲೇಜುಗಳಲ್ಲಿ ಇದರುವರೆಗೂ ಉಳಿದಿರುವ ಎಲ್ಲಾ ಬಿ.ಎಸ್ಸಿ ನರ್ಸಿಂಗ್/ಬಿ.ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ ಸೀಟುಗಳನ್ನು ಆಯಾ ಕಾಲೇಜಿನ ಹಂತದಲ್ಲಿ ಭರ್ತಿ ಮಾಡಲು ಕ್ರಮವಹಿಸುವುದು.

2. ಸದರಿ ಸೀಟು ಹಂಚಿಕೆಗೆ ಇದುವರೆಗೂ ಯಾವುದೇ ಸೀಟು ಹಂಚಿಕೆಯಾಗದಿರುವ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ನೀಡುವುದು.

3. ಹೊಸದಾಗಿ ಸೇರ್ಪಡೆಯಾಗಿರುವ ಸೀಟುಗಳಿಗೆ ಸರ್ಕಾರದಿಂದ ನೀಡಲಾಗಿರುವ ಸೀಟ್ ಮ್ಯಾಟ್ರಿಕ್ಸ್‌ನಂತೆ ಮೆರಿಟ್ ಆಧಾರದಲ್ಲಿ ಭರ್ತಿ ಮಾಡಲು ಕ್ರಮವಹಿಸುವುದು.

4. ಈ ಎಲ್ಲಾ ಸೀಟು ಹಂಚಿಕೆಯನ್ನು ಮೆರಿಟ್ ಆಧಾರದಲ್ಲಿ ಮಾಡಲು ಈ ಕೆಳಗಿನ ಮಾನದಂಡಗಳನ್ನು ಪಾಲಿಸುವುದು:

ಪು.ತಿ.ನೋ

Scanned with CamScanner

ಕರ್ನಾಟಕ ಸರ್ಕಾರ
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
DIRECTORATE OF MEDICAL EDUCATION
BMC&RI (Old Building), 1st Floor, Fort, K.R. Road, Bengaluru-560002.
Phone :+91-80-22870060
Fax:+91-80-22875798
dmekarnataka@yahoo.com



- ದಿನಾಂಕ 12.01.2023ರಂದು ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆವರೆಗೆ ಎಲ್ಲಾ ಅರ್ಹ ಅಭ್ಯರ್ಥಿಗಳ ನೊಂದಣಿ ಮಾಡುವುದು.
- ನೊಂದಣಿ ಮಾಡಿರುವ ಅಭ್ಯರ್ಥಿಗಳ ಪಟ್ಟಿಗೆ ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸಹಿ ಮಾಡುವುದು.
- ಮಧ್ಯಾಹ್ನ 1.00 ಗಂಟೆ ನಂತರ ನೊಂದಾಯಿತ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಕರೆದು ಆಯಾ ಮೀಸಲಾತಿಯನ್ವಯ ಭರ್ತಿಯಾಗದೆ ಉಳಿದಿರುವ ಸೀಟು ಹಂಚಿಕೆಯನ್ನು ನಡೆಸಲು ಕ್ರಮ ವಹಿಸುವುದು.
- ಅದೇ ದಿನ ಸಂಜೆ 5.00 ಗಂಟೆಗೆ ಹಂಚಿಕೆಯಾದ ಸೀಟುಗಳ ಪಟ್ಟಿಯನ್ನು (ಅಭ್ಯರ್ಥಿಗಳ ಹೆಸರು, ನೊಂದಣಿ ಸಂಖ್ಯೆ, ಮೆರಿಟ್, ಮೀಸಲಾತಿ ಮತ್ತು ಹಂಚಿಕೆಯಾಗಿರುವ ಸೀಟುಗಳ)ಸಂಪೂರ್ಣ ವಿವರಗಳನ್ನೊಳಗೊಂಡ ತಖ್ತೆಯನ್ನು ಕೆಇಎಗೆ ಸಲ್ಲಿಸುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

Sujatha M

ನಿರ್ದೇಶಕರು, ವೈದ್ಯಕೀಯ ಶಿಕ್ಷಣ.

**ಪ್ರತಿಯನ್ನು ಇವರ ಮಾಹಿತಿಗಾಗಿ.**

1. ಪ್ರತಿಯನ್ನು ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-560041 ಇವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.
3. ಆಡಳಿತಾಧಿಕಾರಿ, ರಾಜ್ಯದ ಎಲ್ಲಾ ಜಿಲ್ಲೆಗಳ ಸರ್ಕಾರಿ ನರ್ಸಿಂಗ್/ವೈದ್ಯಕೀಯ ಕಾಲೇಜುಗಳು.
4. ಕಛೇರಿ ಪ್ರತಿ.

Scanned with CamScanner